ಈ) ಸದರಿ ಕಟ್ಟಡದ ಮೊದಲ ಅಂತಸ್ತು ದುರಸ್ತಿ ಕಾರ್ಯವನ್ನು ಕೂಡಲೇ ಮಾಡಲು ಸರಕಾರವು ಕ್ರಮಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಟೆಂಡರ್ಸ್ ಕರೆಯಲಾಗಿದೆ. ಟೆಂಡರ್ಸ್ ಅನುಮೋದನೆ ನಂತರ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) -ಅದೇ-

ಈ) ಮೊದಲನೆ ಮಹಡಿ ಕಟ್ಟಲು ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ. ತಡೆಯಾಜ್ಞೆ ತೆರವಾದ ನಂತರ ಕ್ರಮತೆಗೆದುಕೊಳ್ಳಲಾಗುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಅಧ್ಯಕ್ಷರೇ, ಭಾರತದ ನಿಯಂತ್ರಕರು ಮಹಾಲೇಖಪಾಲಕರು, ನೀಡಿರುವ ಕರ್ನಾಟಕ ಸರ್ಕಾರದ 93ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ ವಾಣಿಜ್ಯಕ್ಕೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ನಿಯಮ 334ರ ಮೇರೆಗೆ

1. ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆ ನಂ. 1ರ 256 ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವರ್ಗ ಮಾಡುವುದು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಸಭಾಪತಿಯವರೆ, ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆ ನಂ.(1)ರ 256 ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ಬಿಡುಗಡೆಯಾಗಿದ್ದು ಕಂದಾಯ ಇಲಾಖೆಗೆ ಇದುವರೆಗೂ ವರ್ಗಾವಣೆ ಆಗಿರುವುದಿಲ್ಲ. ಈ ಕಾರಣ ಸ್ವಾಧೀನಾನುಭವದಲ್ಲಿರುವ ಅಕ್ರಮಸಾಗುವಳಿದಾರರಿಗೆ ಜಮೀನು ಮಂಜೂರು ಮಾಡಲು ತೊಂದರೆಯುಂಟಾಗಿರುತ್ತದೆ. ಆದಕಾರಣ ಅರಣ್ಯ ಇಲಾಖೆಯವರು ಕೂಡಲೇ ಕಂದಾಯ ಇಲಾಖೆಗೆ ಈ ಜಮೀನನ್ನು ವರ್ಗಾಯಿಸಲು ಅರಣ್ಯ ಖಾತೆ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ಖಾತೆ ರಾಜ್ಯ ಸಚಿವರು) : ಮಾನ್ಯ ಉಪಸಭಾಪತಿಯವರೇ,

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 32 ಎಲ್‌ಎಡಿ 62 ದಿನಾಂಕ : 1-8-1964ರಂತೆ ಶಿರಾ ತಾಲ್ಲೂಕು ಬುಕ್ಕಾ ಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆನಂ. 1ರಲ್ಲಿ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಹಸ್ತಾಂತರಿಸಲಾಗಿತ್ತು. ಆದರೆ, ಪುನಃ ಸರ್ಕಾರಿ ಆದೇಶ ಸಂಖ್ಯೆ :ಆರ್ ಡಿ 247 ಎಲ್‌ಜಿಟಿ 73 ದಿನಾಂಕ : 18-1-7 4ರಲ್ಲಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾಯಿಸಲ್ಪಟ್ಟಿದ್ದ ಸದರಿ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಲ್ಲಿಯೇ ಉಳಿಸಿಕೊಳ್ಳಲಾಗಿರುವ ಪ್ರಯುಕ್ತ, ಪ್ರಶ್ನಿತ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆ

ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ಮತ್ತು ಮೇಲ್ಕಂಡ 253-34 ಎಕರೆ ಅರಣ್ಯ ಪ್ರದೇಶದಲ್ಲಿ ಯಾವುದೇ ಒತ್ತುವರಿ ಪ್ರಕರಣಗಳು ಇರುವುದಿಲ್ಲ.

2. ಸ್ನಾತಕೋತ್ತರ ಪರೀಕ್ಷೆಗೆ ಸೇವಾ ನಿರತ ವೈದ್ಯರ ಆಯ್ಕೆ

ಶ್ರೀ ಜಿ. ರಾಜುಗೌಡ (ಹಾನೂರು): ಮಾನ್ಯ ಉಪ ಸಭಾಪತಿಯವರೇ, ಸೇವಾನಿರತ ವೈದ್ಯರುಗಳನ್ನು ಒಂದು ನಿರ್ದಿಷ್ಟ ಅವಧಿಯ ಸೇವೆ ಸಲ್ಲಿಸಿದ ನಂತರ ಅವರುಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಆದರೆ ಎರಡು ಸರದಿಯಿಂದಲೂ ಸೇವಾ ನಿರತ ವೈದ್ಯರುಗಳನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಮಾಡಿಲ್ಲವೆಂದು ತಿಳಿದುಬಂದಿದೆ. ಆದರಿಂದಾಗಿ ಬಹಳಷ್ಟು ಮಂದಿ ಸೇವಾ ನಿರತ ವೈದ್ಯರು ನಿರಾಶರಾಗಿದ್ದಾರೆ. ಈ ಹಿಂದೆ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಅರ್ಜಿಗಳನ್ನು ಕರೆದಿದ್ದು ಆಯ್ಕೆ ಮಾಡಲಿಲ್ಲವೆಂದೂ ಕೂಡ ತಿಳಿದುಬಂದಿದೆ.

ಆದ್ದರಿಂದ ಸರ್ಕಾರದ ಸೇವಾ ನಿರತ ವೈದ್ಯರುಗಳ ಬಗ್ಗೆ ತಾಳಿರುವ ಈ ನಿರ್ಲಕ್ಷ್ಯಭಾವನೆಗೆ ಕಾರಣವೇನು ಮತ್ತು ಇದಕ್ಕೆ ಜವಾಬ್ದಾರರು ಯಾರು ಎಂಬ ಬಗ್ಗೆ ಸದನಕ್ಕೆ ಮಾನ್ಯ ಆರೋಗ್ಯ ಸಚಿವರು ಹೇಳಿಕೆ ನೀಡುವುದಲ್ಲದೆ ಅರ್ಹರಾದ ವೈದ್ಯರನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ಪ್ರಸಕ್ತ ಸಾಲಿಗೆ ಆಯ್ಕೆ ಮಾಡುವ ಕ್ರಮವನ್ನು ಕೂಡಲೇ ಕೈಗೊಳ್ಳುವ ಬಗ್ಗೆ ಹೇಳಿಕೆ ನೀಡಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಮಂತ್ರಿಗಳು) : ಮಾನ್ಯ ಉಪ ಸಭಾಪತಿಯವರೆ.

ಭಾರತ ಶ್ರೇಷ್ಠ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 607:92ರಲ್ಲಿ ಶ್ರೀ ಉನ್ನಿಕೃಷ್ಣನ್ ಮತ್ತು ಇತರರು ಹಾಗೂ ಆಂಧ್ರಪ್ರದೇಶ ಸರ್ಕಾರದ ಪ್ರಕರಣದ ಹಿನ್ನೆಲೆಯಲ್ಲಿ ನೀಡಿದ ತೀರ್ಪಿನ ಪ್ರಕಾರ ವೃತ್ತಿಪರ ಕೋರ್ಸ್‌ಗಳಾದ ವೈದ್ಯಕೀಯ, ದಂತ, ಇಂಜಿನಿಯರಿಂಗ್, ಫಾರ್ಮಸಿ ಮತ್ತು ನರ್ಸಿಂಗ್ ಕೋರ್ಸ್‌ಗಳ ಬಗ್ಗೆ ಪ್ರವೇಶ ನಿಯಮಾವಳಿಯನ್ನು ರಚಿಸಲಾಗಿದೆ. ಈ ಪ್ರವೇಶ ನಿಯಮಾವಳಿಯನ್ನು ಸ್ನಾತಕೋತ್ತರ ವ್ಯಾಸಂಗಕ್ಕೂ ಅನ್ವಯಿಸುವಂತೆ ಪರಿಶೀಲಿಸಲಾಗಿ, ಇದನ್ನು 1994-95ನೇ ಸಾಲಿನಿಂದ ಜಾರಿಗೊಳಿಸುವಂತೆ ಸರ್ಕಾರವು ತೀರ್ಮಾನಿಸಿದ್ದು, ಪ್ರಸ್ತುತ ಈ ಸಾಲಿನಲ್ಲಿಈ ಹಿಂದೆ ಜಾರಿಯಲ್ಲಿದ್ದಂತೆ ಪ್ರವೇಶವನ್ನು ಅಂತಿಮಗೊಳಿಸುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ : 603 ಎಂಎಸ್‌ಎಫ್ 93 ದಿನಾಂಕ 7-9-1993ರಲ್ಲಿ ಆದೇಶ ಹೊರಡಿಸಲಾಗಿದೆ. ಹಾಗೂ ಸರ್ಕಾರದ ಪಾಲಿನ ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪರೀಕ್ಷೆಯನ್ನು ದಿನಾಂಕ 26-9-1993ರಂದು ನಡೆಸಲಾಗಿದೆ.

ಈ ಮಧ್ಯೆ ಕರ್ನಾಟಕ ರಾಜ್ಯ ಜ್ಯೂನಿಯರ್ ಡಾಕ್ಟರ್ ಅಸೋಸಿಯೇಷನ್‌ರವರು ಸರ್ಕಾರದ ಈ ನಿಲುವನ್ನು ಪ್ರಶ್ನಿಸಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 33351:93 ದಾಖಲಿಸಿದ್ದು, ಸ್ನಾತಕೋತ್ತರ ಪ್ರವೇಶವನ್ನು ಅರ್ಹತಾ ಆಧಾರದ ಮೇಲೆ ಭರ್ತಿ ಮಾಡುವಂತೆ ಕೋರಿರುತ್ತಾರೆ. ರಾಜ್ಯ ಉಚ್ಚನ್ಯಾಯಾಲಯವು ಸದರಿ ರಿಟ್ ಅರ್ಜಿಗೆ ತಡೆ ಆಜ್ಞೆ ನೀಡಲು ನಿರಾಕರಿಸಿದ್ದರಿಂದ, ಅರ್ಜಿದಾರರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲ್ ಸಂಖ್ಯೆ : 2357 ಮತ್ತು 2358:93ನ್ನು ದಾಖಲಿಸಿದ್ದು, ರಾಜ್ಯ ಉಚ್ಚ ನ್ಯಾಯಾಲಯವು 24-9-1993ರ ಆದೇಶದಲ್ಲಿ ನೀಡಿದ ತಡೆ ಆಜ್ಞೆಯಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ಮತ್ತು ಸರ್ಕಾರಕ್ಕೆ ಸ್ನಾತಕೋತ್ತರ ಪರೀಕ್ಷೆಯ ಫಲಿತಾಂಶವನ್ನು ಈ ಬಗ್ಗೆ ನ್ಯಾಯಾಲಯದ ತೀರ್ಪು ಹೊರಬೀಳುವವರೆಗೆ ಪ್ರಕಟಿಸಿದಂತೆ ಆದೇಶಿಸಿದೆ. ಹಾಗೂ ಸಂಬಂಧಪಟ್ಟ, ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಿಗೆ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಅಭ್ಯರ್ಥಿಗಳನ್ನು ಮುಂದಿನ ಆದೇಶದವರೆಗೂ ಸೇರ್ಪಡೆ ಮಾಡದಂತೆ ನಿರ್ದೇಶನ ನೀಡಿದೆ.